

ಆ ಮಾದರಿಯಲ್ಲಿ ಒಂದೆರಡಲ್ಲ, ಸತತ ಐದು ವರ್ಷಗಳ ಕಾಲ ವಿವಿಧ ಕಾಲಮಾನಗಳಲ್ಲಿ ಅಲ್ಲಿನ ಬಾವಲಿಗಳ ರಕ್ತ, ಜೊಲ್ಲು, ಹಿಕ್ಕೆ, ಮೂತ್ರಗಳ ಮಾದರಿಗಳನ್ನು ಸಂಗ್ರಹಿಸಿತು.

ಅವರ ಪ್ರಯತ್ನ ಹುಸಿಹೋಗಲಿಲ್ಲ. ನೂರಾರು ರೀತಿಯ ಬಾವಲಿಜನ್ಯ ಕೊರೊನಾ ವೈರಸ್‌ಗಳು ಅವರ ಪ್ರಯೋಗ ಶೀಶೆಗಳಲ್ಲಿ ಬಂಧಿಯಾದವು. ಜೀವವೈವಿಧ್ಯದ ಹೊಸ ಲೋಕವೇ ಅವರೆದುರು ತೆರೆದುಕೊಂಡಿತ್ತು. ಅವರು ಪತ್ತೆಹಚ್ಚಿದ ಬಹುತೇಕ ವೈರಸ್‌ಗಳು ನಿರುಪದ್ರವಿಗಳು. ಆದರೆ ಅವುಗಳಲ್ಲಿ ಹನ್ನೆರಡು ಬಗೆಯವು ಮಾತ್ರ 'ಸಾರ್ಸ್' ಗುಂಪಿಗೇ ಸೇರಿದ ಪ್ರಾಣಾಂತಿಕ ವೈರಸ್‌ಗಳಾಗಿದ್ದವು. ಸಾರ್ಸ್‌ಗೆ ನೀಡಲಾಗುವ ಲಸಿಕೆ, ಔಷಧಗಳಿಗೂ ಜಗ್ಗದೆ ಮನುಷ್ಯನ ಶ್ವಾಸಕೋಶವನ್ನು ಚಿಂದಿ ಮಾಡಬಲ್ಲ ರಕ್ಕಸವೈರಸ್‌ಗಳೂ ಅದರಲ್ಲಿದ್ದವು!

## ದೇಹಗಳೇ ಮಿಶ್ರಣಕುಂಡಗಳು!

ಶಿಟೊಯು ಗುಹೆ ಅಷ್ಟೇ ಅಲ್ಲದೆ, ಇನ್ನೂ ಹಲವು ಕಡೆಗಳಲ್ಲಿನ ಬಾವಲಿಗಳಲ್ಲಿರುವ ವೈರಸ್‌ಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಿದ ಅನುಭವ ಝೇಂಗ್ಲಿಗಿದೆ. ಅವರ ಪ್ರಕಾರ, ಬೇರೆ ಬೇರೆ ಬಗೆಯ ವೈರಸ್‌ಗಳು ಒಂದು ಪ್ರಮಾಣದಲ್ಲಿ ಮಿಶ್ರಗೊಂಡರೆ ಅದರಿಂದ ಭಯಾನಕ ರೋಗಾಣುಗಳು ಹುಟ್ಟಿಕೊಳ್ಳುತ್ತವೆ. ಜೀವಿಗಳ ದೇಹವೇ ಅಂಥ ವೈರಸ್ ಮಿಶ್ರಣದ ಕುಂಡಗಳಾಗಬಹುದು. ಹಾಗೆಯೇ ಮತ್ಯಾವುದೋ ಪ್ರಮಾಣದ ಮಿಶ್ರಣದಿಂದ ಆ ವೈರಸ್‌ಗಳ ವಿರುದ್ಧ ಹೋರಾಡುವ ಪ್ರತಿಕಾಯಗಳೂ ಸೃಷ್ಟಿಯಾಗಬಹುದು.

ಆ ಸುಳಿವಿನ ಬೆನ್ನತ್ತಿದ ಝೇಂಗ್ಲಿ ತಂಡ ಶಿಟೊಯು ಗುಹೆಯ ಸಮೀಪದ ಹಳ್ಳಿಗಳನ್ನು ಪ್ರವೇಶಿಸಿತು. ಶಿಟೊಯು ಗುಹೆಯ ಸಮೀಪದ ಹಳ್ಳಿಗಳಿಗೆ ಹೊಂದಿಕೊಂಡ ಹಾಗೆ ಇರುವ ಸೊಂಪಾದ ಗುಡ್ಡಗಳು ತಮ್ಮಲ್ಲಿನ ಗುಲಾಬಿ, ಕಿತ್ತಳೆ, ವಾಲ್‌ನಟ್ ಮತ್ತು ಹಾಥರ್ನ್ ಹಣ್ಣುಗಳಿಗಾಗಿ ಜನಪ್ರಿಯ. 2015ರಲ್ಲಿ ಝೇಂಗ್ಲಿ ತಂಡ ಆ ಪ್ರದೇಶದ ನಾಲ್ಕು ಹಳ್ಳಿಗಳಲ್ಲಿ ಅಡ್ಡಾಡಿ 200 ಜನರ ರಕ್ತದ ಮಾದರಿಗಳನ್ನು ಸಂಗ್ರಹಿಸಿತು. ಆ 200 ಜನರಲ್ಲಿ ಮೂವರ ರಕ್ತಮಾದರಿಗಳಲ್ಲಿ ಸಾರ್ಸ್ ವಿರುದ್ಧ ಹೋರಾಡುವ ಪ್ರತಿಕಾಯಗಳು ಪತ್ತೆಯಾದವು! ಸಾಮಾನ್ಯವಾಗಿ ಸಾರ್ಸ್ ವೈರಸ್ ದೇಹವನ್ನು ಹೊಕ್ಕಾಗ ಅದರ ವಿರುದ್ಧ ಹೋರಾಡಲು ಪ್ರತಿಕಾಯಗಳು ಸೃಷ್ಟಿಯಾಗುತ್ತವೆ. ಇಲ್ಲವೇ ಇನ್ಯಾವುದೋ ಪ್ರಾಣಿಗಳ ದೇಹದಲ್ಲಿನ ಪ್ರತಿಕಾಯಗಳು ಇವರ ದೇಹವನ್ನು ಪ್ರವೇಶಿಸಿರುತ್ತವೆ. ಆದರೆ ಅವೆರಡೂ ಸಾಧ್ಯತೆಗಳೂ ಅಲ್ಲಿರಲಿಲ್ಲ. ಆ ವ್ಯಕ್ತಿಗಳಲ್ಲಿ ಯಾವತ್ತಿಗೂ ಸಾರ್ಸ್ ಅಥವಾ ನ್ಯುಮೋನಿಯಾ ಲಕ್ಷಣಗಳು ಕಾಣಿಸಿಕೊಂಡಿರಲೇ ಇಲ್ಲ. ಹಾಗೂ ಅವರು ಬಾವಲಿಗಳ ಸಂಪರ್ಕಕ್ಕೆ ಬಂದಿರುವ ಸಾಧ್ಯತೆಯೂ ಇರಲಿಲ್ಲ.

ಇದಕ್ಕೂ ಮೂರು ವರ್ಷಗಳ ಹಿಂದೆ ಝೇಂಗ್ಲಿ ತಂಡಕ್ಕೆ ಯುನ್ನಾನ್ ಸಮೀಪದ ಮೊಜಿಯಾಂಗ್ ಕೌಂಟಿಯಿಂದ ಬುಲಾವ್ ಬಂದಿತ್ತು. ಅಲ್ಲಿ ಆರು ಮಕ್ಕಳು ನ್ಯುಮೋನಿಯಾವನ್ನು ಹೋಲುವ ವಿಚಿತ್ರ ಕಾಯಿಲೆಯಿಂದ ಬಳಲುತ್ತಿದ್ದರು. ಆ ಕಾಯಿಲೆ ಜಾಡು ಹಿಡಿದು ಝೇಂಗ್ಲಿ ತಂಡ ಹೊರಟದ್ದೂ ಆ ಊರಿನ ಸಮೀಪದ ಬಾವಲಿ ಗುಹೆಗೇ. ಅಲ್ಲಿನ ಬಾವಲಿಗಳ ದೇಹದ ಮಾದರಿಗಳನ್ನು ತೆಗೆದುಕೊಂಡು ಪರೀಕ್ಷಿಸಿದಾಗ ಆರು ಬಗೆಯ ಬಾವಲಿಗಳ ದೇಹದಲ್ಲಿ ಬೇರೆ ಬೇರೆ ಬಗೆಯ ಕೊರೊನಾ ವೈರಸ್‌ಗಳ ಸಮೂಹವೇ ಪತ್ತೆಯಾಗಿತ್ತು. ಹಲವು ಬಾವಲಿಗಳ ದೇಹದಲ್ಲಿ ಬೇರೆ ಬೇರೆ ಬಗೆಯ ವೈರಸ್‌ಗಳು ಸೇರಿಕೊಂಡು ಬಾವಲಿ ದೇಹವನ್ನೇ ಕಾರ್ಖಾನೆಯನ್ನಾಗಿಸಿಕೊಂಡು ಹೊಸ ರೀತಿಯ ವೈರಸ್‌ಗಳನ್ನು ಹುಟ್ಟುಹಾಕುವುದರಲ್ಲಿ ಮಗ್ನವಾಗಿದ್ದವು.

## ತಪ್ಪು ನಮ್ಮದೇ...

ಕಾಡಿನಲ್ಲಿರುವ ಆ ವೈರಸ್‌ಗಳು ಈಗ ಪದೇಪದೇ ಮನುಷ್ಯನ ದೇಹವನ್ನು ಹೊಕ್ಕು ಪ್ರಳಯಾಂತಕವಾಗುತ್ತಿರುವುದಕ್ಕೆ ಮುಖ್ಯ ಕಾರಣಗಳು ಏನು? ತಮ್ಮ ಹದಿನಾರು ವರ್ಷಗಳ ಸಂಶೋಧನೆ ಮತ್ತು ಸಾಮಾಜಿಕ ಬದಲಾವಣೆಗಳ ಅವಲೋಕನದ ಆಧಾರದ ಮೇಲೆ ಝೇಂಗ್ಲಿ ಹೇಳುವುದು – ಇದಕ್ಕೆಲ್ಲ ಮನುಷ್ಯನೇ ಕಾರಣ.

'ವಿಪರೀತವಾಗಿ ಹೆಚ್ಚುತ್ತಿರುವ ಜನಸಂಖ್ಯೆ, ಅದರ ಪರಿಣಾಮವಾಗಿ ನಡೆಯುತ್ತಿರುವ ಅರಣ್ಯಪ್ರದೇಶಗಳ ಒತ್ತುವರಿ, ಅನಿರೀಕ್ಷಿತ ಮತ್ತು ಅನುಚಿತವಾಗಿ ಭೂಪ್ರದೇಶಗಳಲ್ಲಿ ಆಗುತ್ತಿರುವ ಬದಲಾವಣೆ, ಲೈವ್‌ಸ್ಟಾಕ್ ಎಂಬ ಅಂತರರಾಷ್ಟ್ರೀಯ ಮಾರುಕಟ್ಟೆಯ ವಹಿವಾಟುಗಳು, ದೇಶದ ಒಳಗೆ ಮತ್ತು ಜಾಗತಿಕವಾಗಿ ತ್ವರಿತಗತಿಯಲ್ಲಿ ಏರುತ್ತಿರುವ ಪ್ರಯಾಣಗಳು – ಈ ಎಲ್ಲವೂ ಪ್ರಕೃತಿಯ ಬಹುಸೂಕ್ಷ್ಮ ವಲಯಗಳ ಮೇಲೆ ಕೆಟ್ಟ ಪರಿಣಾಮಗಳನ್ನು ಬೀರುತ್ತಿವೆ. ಅದರ ಪರಿಣಾಮವಾಗಿಯೇ ಹೊಸ ಹೊಸ ಸಾಂಕ್ರಾಮಿಕ

**2004ರಲ್ಲಿ, ಝೇಂಗ್ಲಿ ನೇತೃತ್ವದದ ಅಂತರರಾಷ್ಟ್ರೀಯ ವಿಜ್ಞಾನಿಗಳ ತಂಡ ರಾತ್ರಿಯ ಹೊತ್ತಿನಲ್ಲಿ ಬಾವಲಿಗಳ ರಕ್ತ, ಮೂತ್ರ ಮತ್ತು ಹಿಕ್ಕೆಯ ಮಾದರಿ ಸಂಗ್ರಹಿಸುತ್ತಿರುವುದು**

**ಚಿತ್ರಕೃಪೆ: ವುಹಾನ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ**

